ನೆನಪಾಗುತ್ತದೆ. ಒಮ್ಮೊಮ್ಮೆ ಅವಸರ ಇದ್ದಾಗ ಇಬ್ಬರು ಮೂವರು ಸೇರಿ ಸ್ನಾನ ಮಾಡುವುದು ನಡೆಯುತ್ತಿತ್ತು. ಸ್ನಾನದ ವೇಳೆಗಳು ಕೂಡ ಬದಲಾಗುತ್ತಿದ್ದವು. ಅರವತ್ತು ಎಪ್ಪತ್ತರ ದಶಕಗಳು ಜನಪ್ರಿಯ ಸಿನಿಮಾಗಳ ಯುಗ. 'ಪಾನಿ ಮೆಂ ಜಲೆ ಮೇರಾ ಗೋರಾ ಬದನ್' ಎಂಬ ಜನಪ್ರಿಯ ಮಾದಕ ಹಾಡನ್ನು ನಮ್ಮ ಕಡುಗಪ್ಪು ಬಣ್ಣದ ಮಿತ್ರನೊಬ್ಬ 'ಪಾನಿ ಮೆಂ ಜಲೆ ಮೇರಾ ಕಾಳಾ ಬದನ್' ಎಂದು ಹಾಡುತ್ತಾ ಸ್ನಾನ ಮಾಡುತ್ತಿದ್ದ. ಸಿನಿಮಾಗಳಲ್ಲಿನ ಸ್ನಾನದ ದೃಶ್ಯಗಳು, ಮಳೆಯಲ್ಲಿ ತೊಯ್ದ ನಾಯಕ ನಾಯಕಿಯರ ಮೋಹಕ ದೇಹಗಳ ಅಂಗಾಂಗಗಳು ಅಂದಿನ ಸಿನಿಮಾಗಳಲ್ಲಿ ಕಾಣಿಸುತ್ತಿದ್ದ ಬೋಲ್ಡ್ ದೃಶ್ಯಗಳು. ಅವು ಯುವ ಪೀಳಿಗೆಯ ಕಣ್ಮನ ಸೆಳೆಯುತ್ತಿದ್ದವು.

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಕಥಾ ಸಂಗಮ' ಚಿತ್ರದಲ್ಲಿ, ಈಶ್ವರ್‌ಚಂದ್ರ ಅವರ ಕಥೆ ಆಧಾರಿತ 'ಮುನಿತಾಯಿ' ಚಿತ್ರದಲ್ಲಿ ಓರ್ವ ಕುರುಡ ಮಹಿಳೆ ಸ್ನಾನ ಮಾಡುವುದನ್ನು ಮನೆಯಲ್ಲಿದ್ದ ಪಡ್ಡೆ ಹುಡುಗ ಮತ್ತು ಪೋಲಿಗಳು ನೋಡಿದ್ದು ಮತ್ತು ಕುರುಡ ಮಹಿಳೆಯ ಅಸಹಾಯಕತೆಯ ಲಾಭ ಪಡೆದು ಅವಳ ಮೇಲೆ ಅತ್ಯಾಚಾರವೆಸಗಿದ ದೃಶ್ಯ, ಆನಂತರದ ಘಟನೆಗಳನ್ನು ಬಹಳ ಮನೋಜ್ಞವಾಗಿ ಚಿತ್ರಿಸಲಾಗಿದೆ. ಹಿಂದೆ ನಟೀಮಣಿಯೊಬ್ಬಳು ಮೈಮೇಲೆ ಒಂಚೂರು ಬಟ್ಟೆ ಇದ್ದರೂ ಸ್ನಾನ ಮಾಡಿದಂತೆ ಅನಿಸುವುದಿಲ್ಲ ಅಂದಿದ್ದಳು. ಇರಾನಿನ ಅಮೌ ಹಾಜಿ ಅಂಥವರು ಒಂದು ಕಡೆ, ಇಂಥವರು ಒಂದು ಕಡೆ. ಮಡಿವಂತರು ಮತ್ತೊಂದು ಕಡೆ. ಸ್ನಾನದ ಮನೆಯಲ್ಲಿ ಹೇಗಿದ್ದರೇನು..

ಇನ್ನು ನಮ್ಮ ಕುಂಭಮೇಳಗಳು, ಸಂಕ್ರಮಣ ಮುಂತಾದ ವಿಶೇಷ ಸಂದರ್ಭಗಳಲ್ಲಿ ನಡೆಯುವ ನದಿ ಸ್ನಾನ, ಸಮುದ್ರ ಸ್ನಾನಗಳನ್ನು ಮರೆಯುವಂತಿಲ್ಲ. ನಾವು ಇತ್ತೀಚೆಗೆ ಹರಿದ್ವಾರದಲ್ಲಿ ಇಂತಹ ಒಂದು ಸ್ನಾನ ಮಾಡಬೇಕಾಯಿತು. ಅಂದು ಅಮಾವಾಸ್ಯೆ. ಗಂಗಾ ನದಿಯಲ್ಲಿ ವಿಶೇಷ ಸ್ನಾನ ಮಾಡೋಣವೆಂದರೆ ಕಾಲಿಡಲು ಜಾಗ ಇಲ್ಲದಷ್ಟು ಜನಜಾತ್ರೆ. ಹರಿದ್ವಾರದ ಗಂಗಾ ನದಿಯ ಉದ್ದಕ್ಕೂ ಇರುವ ಸ್ನಾನ ಘಟ್ಟದಲ್ಲಿ ತುಂಬಿ ಹರಿಯುವ ನದಿಯ ದಂಡೆಗುಂಟ ಹೆಣ್ಣು ಗಂಡು ಎಂಬ ಯಾವ ಭೇದಭಾವ, ಸಂಕೋಚಗಳಿಲ್ಲದೆ ನದಿಯಲ್ಲಿ ಮಿಂದೇಳುತ್ತಿದ್ದ, ಬಟ್ಟೆ ಬದಲಿಸುತ್ತಿದ್ದ ಜನ ಸಮೂಹ. ಭಕ್ತಿ ಭಾವವೆಂಬ ನೀರಿನಲ್ಲಿ ಅದ್ದಿ ತೆಗೆದಂತೆ ಮಿಂದು ಪವಿತ್ರರಾಗುತ್ತಿದ್ದರು. ಅದೊಂದು ಸಾಮೂಹಿಕ ಶ್ರದ್ಧಾ ಭಕ್ತಿಯ ಸ್ನಾನ. ಪ್ರಯಾಗದಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನೆರೆವ ಕುಂಭಮೇಳದಲ್ಲಿ ಲಕ್ಷಾಂತರ ಜನರ ಪುಣ್ಯ ಸ್ನಾನ, ನಾಗಸಾಧುಗಳ ಬೆತ್ತಲೆ ಸ್ನಾನ ಜಗತ್ಪ್ರಸಿದ್ಧ. ಜನರ ಸ್ನಾನದಿಂದ ಮಲೀನಗೊಳ್ಳದ ಗಂಗೆ, ಜನರು ನದಿಗೆ ಸುರಿವ, ಹರಿಯಬಿಡುವ ತ್ಯಾಜ್ಯದಿಂದ ಕಲ್ಮಶಗೊಂಡು ಮ್ಲಾನವದನಳಾಗಿ ಮುಂದೆ ಸಾಗುತ್ತಾಳೆ. ದೇಶದ ತುಂಬೆಲ್ಲ ನದಿಗಳಿಗೆ ಸೇರುವ ಕಲ್ಮಶಗಳು ಕಡಿಮೆ ಏನಲ್ಲ.

ಇನ್ನು ಬದರೀನಾಥ, ಕೇದಾರನಾಥ, ಗಂಗೋತ್ರಿ ಮುಂತಾದ ಹಿಮಾಲಯದ ಅತಿ ಶೀತ ಪ್ರದೇಶದಲ್ಲಿ ಭಕ್ತಾದಿಗಳ ಪವಿತ್ರ ಸ್ನಾನಕ್ಕಾಗಿ ನಿಸರ್ಗ ಕರುಣಿಸಿದ ಬಿಸಿನೀರ ಬುಗ್ಗೆಗಳುಂಟು. ಅಲ್ಲಿನ ಹಬೆಯಾಡುವ ನೀರಲ್ಲಿ ಭಕ್ತಾದಿಗಳು ಮಿಂದು ಪಾವನರಾಗುತ್ತಾರೆ. ಹರಿದ್ವಾರದ ಹತ್ತಿರ ಡೆಹ್ರಾಡೂನ್ ಸಮೀಪ ಸಹಸ್ರಧಾರಾ ಎಂಬ ಒಂದು ಜಲಪಾತ ಇದೆ. ಅದು ಸಹಸ್ರ ಸಂಖ್ಯೆಯಲ್ಲಿ ಸಣ್ಣ ಜಲಪಾತಗಳಾಗಿ ಹರಿವ ನದಿ. ಸುಮಾರು ಇಪ್ಪತ್ತು ಅಡಿ ಎತ್ತರದ ಒಂದು ಮುಖ್ಯ ಜಲಪಾತ, ಅದರ ಕೆಳಗೆ ಸುಮಾರು ಒಂದು ಕಿ.ಮೀ. ಉದ್ದಕ್ಕೂ ಸಣ್ಣ ಸಣ್ಣ ಜಲಪಾತಗಳನ್ನು ಸೃಷ್ಟಿಸುತ್ತಾ ನದಿ ಹರಿಯುತ್ತದೆ. ಅಲ್ಲಿ ಉದ್ದಕ್ಕೂ ಸಹಸ್ರಾರು ಜನರು ಸ್ನಾನ ಮಾಡುತ್ತಿರುವುದನ್ನು ಗಮನಿಸಿ ನಾವೂ ನೀರಿಗಿಳಿದೆವು. ಆ ನೀರಿನಲ್ಲಿ ಸಲ್ಫರ್ ಅಂಶವಿದ್ದು ಅದು ಚರ್ಮರೋಗ ನಿವಾರಕ ಎಂದು ಹೇಳಲಾಗಿದೆ. ಹೀಗಾಗಿ ಸಹಸ್ರಧಾರ ಯಾವತ್ತೂ ಜನರಿಂದ ತುಂಬಿ ತುಳುಕುತ್ತದೆ. ಮಹಿಳೆಯರು ಮಕ್ಕಳು ಆದಿಯಾಗಿ ಎಲ್ಲರೂ ಅರೆ ಬೆತ್ತಲೆ ಸ್ನಾನ ಮಾಡುತ್ತ ಕುಣಿದು ಕುಪ್ಪಳಿಸುತ್ತಾರೆ. ಸದರಿ ಸ್ಥಳವು ಸ್ನಾನ ಮಾಡುವ ಪ್ರವಾಸಿ ತಾಣವಾಗಿ ಅಭಿವೃದ್ಧಿ ಹೊಂದಿದೆ. ಅಲ್ಲಿ ನೂರಾರು ಅಂಗಡಿ ಮುಂಗಟ್ಟುಗಳು, ಹಲವು ಬಗೆಯ ತಿಂಡಿ ತಿನಿಸು ಊಟದ ಮಳಿಗೆಗಳು, ಮೋಜಿನ ಆಟಗಳು ಇತ್ಯಾದಿ. ಯಾವತ್ತು ಜನಜಂಗುಳಿಯಿಂದ ತುಂಬಿರುತ್ತದೆ.